ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 447

ವಿಧಾನ ಪರಿಷತ್ ಸದಸ್ಯರು : ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 06.03.2020

ಉತ್ತರಿಸುವವರು : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕೆಆರ್ಐಡಿಎಲ್ ನಿಂದ ಕಳೆದ 05 ವರ್ಷಗಳಿಂದ ಕೈಗೊಂಡಿರುವ ಕಾಮಗಾರಿಗಳು ಎಷ್ಟು; ಪ್ರತ್ಯೇಕವಾಗಿ ಮಂಡ್ಯ ಜಿಲ್ಲೆಯ ತಾಲ್ಲೂಕುವಾರು ವಿವರ ನೀಡುವುದು;	ರಾಜ್ಯದಲ್ಲಿ ಕೆಆರ್ಐಡಿಎಲ್ ವತಿಯಿಂದ ಕಳೆದ 05 ವರ್ಷಗಳಲ್ಲಿ ಕೈಗೊಂಡ ಕಾಮಗಾರಿಗಳ ಸಂಖ್ಯೆ **53694.** ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.**(ಅನುಬಂಧ-1)** ಮಂಡ್ಯ ಜಿಲ್ಲೆಯ 07 ತಾಲ್ಲೂಕುಗಳಲ್ಲಿ ಕೈಗೊಂಡ ಕಾಮಗಾರಿಗಳ ವಿವರ ಕೆಳಕಂಡಂತಿದೆ.

ರೂ.ಲಕ್ಷಗಳಲ್ಲಿ

ಜಿಲ್ಲೆ / ತಾಲ್ಲೂಕು	ಕೈಗೊಂಡ ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ	ಬಿಡುಗಡೆಯಾದ ಅನುದಾನ	ವೆಚ್ಚ	ಷರಾ
ಮಂಡ್ಯ	364	8512.84	6856.56	5532.77	
ಮದ್ದೂರು	165	3193.46	2706.29	2193.75	
ಮಳವಳ್ಳಿ	81	2064.27	1667.33	875.35	
ಪಾಂಡವಪುರ	255	3792.99	2872.99	1777.64	
ಶ್ರೀರಂಗಪಟ್ಟಣ	113	2541.43	1758.93	960.20	
ಕೆ.ಆರ್ ಪೇಟೆ	126	2514.65	1786.06	1085.48	
ನಾಗಮಂಗಲ	175	3502.02	2374.76	1815.94	
ಒಟ್ಟು	**1279**	**26121.66**	**20022.92**	**14241.13**	

ವರ್ಷವಾರು ವಿವರಗಳನ್ನು **ಅನುಬಂಧ-ಅ** ದಲ್ಲಿ ಲಗತ್ತಿಸಲಾಗಿದೆ.

ಕ್ರ.ಸಂ	ಪ್ರಶ್ನೆ	ಉತ್ತರ
ಆ)	ಇವುಗಳಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳು ಎಷ್ಟು; ಹಾಗೂ ಬಳಕೆಯಾದ ಅನುದಾನವೆಷ್ಟು; (ಮಂಡ್ಯ ಜಿಲ್ಲೆಯ ತಾಲ್ಲೂಕುವಾರು ಮಾಹಿತಿ ನೀಡುವುದು)	ಕಳೆದ 05-ವರ್ಷಗಳಲ್ಲಿ ಕೈಗೊಂಡ ಒಟ್ಟು 53694 ಕಾಮಗಾರಿಗಳಲ್ಲಿ 28440 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ವಿವರಗಳನ್ನು **ಅನುಬಂಧ-2** ರಲ್ಲಿ ಲಗತ್ತಿಸಲಾಗಿದೆ. ಮಂಡ್ಯ ಜಿಲ್ಲೆಯ 7 ತಾಲ್ಲೂಕುಗಳ ಪೂರ್ಣಗೊಂಡ ಕಾಮಗಾರಿಗಳ ವಿವರ ಕೆಳಕಂಡಂತಿದೆ

ಜಿಲ್ಲೆ / ತಾಲ್ಲೂಕು	ಪೂರ್ಣ ಗೊಂಡ ಕಾಮಗಾರಿಗಳ ಸಂಖ್ಯೆ	ಬಳಕೆಯಾದ ಅನುದಾನ	ಷರಾ
ಮಂಡ್ಯ	199	5200.91	
ಮದ್ದೂರು	107	2193.75	
ಮಳವಳ್ಳಿ	63	875.35	
ಪಾಂಡವಪುರ	143	2144.95	
ಶ್ರೀರಂಗಪಟ್ಟಣ	76	960.20	
ಕೆ.ಆರ್ ಪೇಟೆ	81	1085.48	
ನಾಗಮಂಗಲ	57	938.73	
ಒಟ್ಟು	**726**	**13399.37**	

ಮಂಡ್ಯ ಜಿಲ್ಲೆಯಲ್ಲಿ ಪೂರ್ಣಗೊಂಡ ಕಾಮಗಾರಿಗಳ ವರ್ಷವಾರು ವಿವರಗಳನ್ನು **ಅನುಬಂಧ-ಆ** ದಲ್ಲಿ ಲಗತ್ತಿಸಲಾಗಿದೆ.

ಇ)	ಪೂರ್ಣಗೊಂಡ ಕಾಮಗಾರಿಗಳ ಗುಣಮಟ್ಟ ಪರಿಶೀಲಿಸಿದ ಏಜೆನ್ಸಿ ಯಾವುದು (ಕಿ.ಅ) (ಜಿಲ್ಲಾವಾರು ಏಜೆನ್ಸಿಯವರ ಮಾಹಿತಿ ನೀಡುವುದು;)	ಗುಣಮಟ್ಟ ಪರಿಶೀಲನೆಗೆ ಸೇವೆಯನ್ನು ಪಡೆದ ಜಿಲ್ಲಾವಾರು ಏಜೆನ್ಸಿ ವಿವರವನ್ನು (**ಅನುಬಂಧ-ಇ**) ರಲ್ಲಿ ಲಗತ್ತಿಸಲಾಗಿದೆ.
ಈ)	ಕೆಆರ್‌ಐಡಿಎಲ್ ವತಿಯಿಂದ ನಿರ್ವಹಿಸಿದ ಮತ್ತು ನಿರ್ವಹಿಸುತ್ತಿರುವ ಕಾಮಗಾರಿಗಳು ಕಳಪೆ ಗುಣಮಟ್ಟದಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಕಳಪೆ ಕಾಮಗಾರಿಗಳನ್ನು ನಿರ್ವಹಿಸಿರುವವರ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?	ಕೆಆರ್‌ಐಡಿಎಲ್ ಸಂಸ್ಥೆಗೆ ಸರ್ಕಾರದ ವಿವಿಧ ಯೋಜನೆಯಡಿ ವಹಿಸಿರುವ ಕಾಮಗಾರಿಗಳ ಅನುಷ್ಠಾನ ಸಂಬಂಧದಲ್ಲಿ ನಿರ್ಧಿಷ್ಟ ಕಾಲಮಿತಿ ಹಾಗೂ ಗುಣಮಟ್ಟ ಕಾಯ್ದುಕೊಳ್ಳಲು ಮೂರು ಹಂತದ ಗುಣನಿಯಂತ್ರಣ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಕಾಮಗಾರಿಗಳನ್ನು ಅನುಷ್ಠಾನ ಮಾಡುವ ಸಂಬಂಧ ಜಾರಿಗೆ ತಂದಿರುವ ಮೂರು ಹಂತದ ಗುಣನಿಯಂತ್ರಣ ವ್ಯವಸ್ಥೆಯ ವಿವರಗಳನ್ನು **ಅನುಬಂಧ-'ಈ'** ದಲ್ಲಿ ಸಲ್ಲಿಸಿದೆ. ಕಾಮಗಾರಿಗಳನ್ನು ನಿರ್ಧಿಷ್ಟ ಕಾಲಮಿತಿಯೊಳಗೆ ಪೂರ್ಣಗೊಳಿಸುವ ಸಂಬಂಧ, ಜಿಲ್ಲೆಯಲ್ಲಿನ ವಿಭಾಗ/ ಉಪ ವಿಭಾಗಗಳ ಅಧಿಕಾರಿಗಳ ನಿಯತವಾಗಿ ಕಾಮಗಾರಿ ಪರಿವೀಕ್ಷಣೆ ಮಾಡಿ ಅನುಷ್ಠಾನ ಮಾಡಲು ತಿಳಿಸಲಾಗಿರುತ್ತದೆ. ಕಳಪೆ ಗುಣಮಟ್ಟದ ಕಾಮಗಾರಿಗಳ ಬಗ್ಗೆ ಬಂದಿರುವ ದೂರುಗಳನ್ನು ಪರಿಶೀಲಿಸಿ, ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಲಾಗಿರುತ್ತದೆ. ಅಲ್ಲದೇ ಸಂಸ್ಥೆಗೆ ವಹಿಸಿರುವ ಕಾಮಗಾರಿಗಳ ಕುರಿತಂತೆ ಕಳಪೆ ಗುಣಮಟ್ಟದೆಂದು ನಿರ್ಧಿಷ್ಟ ದೂರುಗಳು ಬಂದಲ್ಲಿ, ಸದರಿ ಪ್ರಕರಣಗಳನ್ನು ಪರಿಶೀಲಿಸಿ, ನಿಯಮಾನುಸಾರ ಕ್ರಮವಹಿಸಲಾಗುವುದು.

ಸಂ: ಗ್ರಾಅಪ/ 1/24/ಆರ್‌ಆರ್‌ಸಿ/2020

(ಕೆ.ಎಸ್. ಈಶ್ವರಪ್ಪ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.